25th July 2008

(ಸದನವು ಬೆಳಿಗ್ಗೆ 10.50 ಗಂಟೆಗೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ಪತ್ರದ ಮೂಲಕ ಬರಗಾಲದ ಬಗ್ಗೆ ಮಾತನಾಡಲು ಅವಕಾಶ ಕೊಡಲು ತಿಳಿಸಿದ್ದೇನೆ.

ಅಧ್ಯಕ್ಷರು : ತಾವು ಕೊಟ್ಟಿದ್ದೀರಿ. ಅದನ್ನು ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಲು ಕೊಟ್ಟಿದ್ದೇನೆ.

ಅಧ್ಯಕ್ಷರು : ಆಯಿತು. ಅದನ್ನು ಪ್ರಶ್ನೋತ್ತರ ಮುಗಿದ ತಕ್ಷಣ ತೆಗೆದುಕೊಳ್ಳೋಣ.

1. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವುದು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 52 (9)
2. ಸದಸ್ಯರು ಹೆಸರು : ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ)
3. ಉತ್ತರಿಸುವವರು : ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಭದ್ರಾವತಿ ಕ್ಷೇತ್ರದಲ್ಲಿ ಹಲವಾರು ಅಂಗನವಾಡಿ ಕೇಂದ್ರಗಳು ತುಂಬಾ ದುಸ್ಥಿತಿಯಲ್ಲಿದ್ದು, ಆಹಾರ ಪದಾರ್ಥಗಳು ಸರಿಯಾಗಿ ಸರಬರಾಜು ಆಗುತ್ತಿಲ್ಲದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿವೆಯೇ:

ಉತ್ತರ

ಭದ್ರಾವತಿ ಕ್ಷೇತ್ರದಲ್ಲಿನ 261 ಅಂಗನವಾಡಿ ಕೇಂದ್ರಗಳಿದ್ದು, ಸದರಿ ಅಂಗನವಾಡಿ ಕೇಂದ್ರಗಳಲ್ಲಿ 146 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ. 20 ಕಟ್ಟಡಗಳು ದುಃಸ್ಥಿತಿಯಲ್ಲಿರುತ್ತವೆ. ರಾಜ್ಯವಲಯದಲ್ಲಿ ದುರಸ್ತಿಗಾಗಿ ಯಾವುದೇ ಯೋಜನೆ ರೂಪಿಸದಿರುವುದರಿಂದ ಸದರಿ ಕಟ್ಟಡಗಳನ್ನು ದುರಸ್ತಿಗೊಳಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಕೋರಲಾಗಿದೆ. ಆಹಾರ ಪದಾರ್ಥಗಳು ಸರಿಯಾಗಿ ಸರಬರಾಜು ಆಗದೇ ಇರುವ ಕುರಿತು ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.

ಪ್ರಶ್ನೆ

ಆ) ಹಾಗಿದ್ದಲ್ಲಿ ಭದ್ರಾವತಿ ಕ್ಷೇತ್ರಕ್ಕೆ ಹೊಸದಾಗಿ 50 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗುವುದೇ.

ಉತ್ತರ

ಯೋಜನೆಗೆ ಹೊಸದಾಗಿ 2 ಅಂಗನವಾಡಿ ಕೇಂದ್ರಗಳು ಹಾಗೂ 22 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೋರಿ ದಿನಾಂಕ: 27-10-2007 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಪ್ರಶ್ನೆ

ಇ) ಸದರಿ. ಕ್ಷೇತ್ರದ ಸಿ.ಡಿ.ಪಿ.ಒ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವುದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ:

ಉತ್ತರ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು. ಭದ್ರಾವತಿ ಇವರ ಮೇಲೆ ಬಂದಿರುವ ದೂರಿನ ಬಗ್ಗೆ ಮಾಡಲಾದ ತನಿಖೆಯ ವರದಿಯ ಆಧಾರದ ಮೇಲೆ ವಿಶೇಷ ಲೆಕ್ಕ ತಪಾಸಣೆ ಮಾಡಲು ಆದೇಶಿಸಿದ್ದು. ಪರಿಶೀಲನೆಯಲ್ಲಿರುತ್ತದೆ.

ಪ್ರಶ್ನೆ

ಈ) ಹಾಲಿ ಅಂಗನವಾಡಿ ಕೇಂದ್ರಗಳ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಪರಿಶೀಲನೆಯ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಭದ್ರಾವತಿ ಶಿಶು ಅಭಿವೃದ್ಧಿ ಯೋಜನೆಯಲ್ಲಿ ದುಸ್ಥಿತಿಯಲ್ಲಿರುವ ಅಂಗನವಾಡಿ ಕಟ್ಟಡಗಳು

ಕ್ರ.ಸಂ.	ಗ್ರಾಮದ ಹೆಸರು	ದುಸ್ಥಿತಿಯ ವಿವರ	ತಗಲುವ ವೆಚ್ಚ
1.	ಮಾರುತಿ ನಗರ	ನೆಲ, ಮೇಲ್ಚಾವಣಿ, ಕಿಟಕಿ, ಬಾಗಿಲು ಇತ್ಯಾದಿ	80.000/–
2.	ಬಸಾಪುರ	ಮೇಲ್ಚಾವಣಿ.ಕಿಟಕಿ.ಬಾಗಿಲು ಇತ್ಯಾದಿ	80.000/–
3.	ಸೀಗೆಬಾಗಿ–1	ಮೇಲ್ಚಾವಣಿ ರಿಪೇರಿ	50.000/–
4.	ಸೀಗೆಬಾಗಿ–2	ನೆಲ ಮತ್ತು ಬಾಗಿಲು ರಿಪೇರಿ	20.000/–
5.	ಸಿದ್ದಾಪುರ ತಾಂಡ	ಹೆಂಚುಗಳು ಒಡೆದುಹೋಗಿವೆ	3.000/–
6.	ಹೊಸೂರು ಕ್ಯಾಂಪ್	ಮೇಲ್ಚಾವಣಿ, ಕಿಟಕಿ. ಬಾಗಿಲು ಇತ್ಯಾದಿ	75.000/–
7.	ಕಣಕಟ್ಟೆ –1	ಮೇಲ್ಚಾವಣಿ. ಕಿಟಕಿ, ಬಾಗಿಲು ಇತ್ಯಾದಿ	50.000/–
8.	ಭದ್ರಾ ಕಾಲೋನಿ	ನೆಲ.ಕಿಟಿಕಿ. ಬಾಗಿಲು ಇತ್ಯಾದಿ	50.000/–
9.	ಬೊಮ್ಮನಕಟ್ಟೆ –2	ನೆಲ, ಮೇಲ್ಚಾವಣಿ, ರಿಪೇರಿ	50.000/–
10.	ಶಿವರಾಮನಗರ	ಮೇಲ್ಚಾವಣಿ ಸೋರುತ್ತದೆ	30.000/–
11.	ವಿಶ್ವೇಶ್ವರನಗರ	ಮೇಲ್ಚಾವಣಿ ಸೋರುತ್ತದೆ. ಕಿಟಕಿ ಬಾಗಿಲು ಹಾಳಾಗಿದೆ	75.000/–
12.	ಹಬ್ಬಂಡಿ ತಾಂಡ	ಮೇಲ್ಚಾವಣಿ ಸೋರುತ್ತದೆ. ಕಿಟಕಿ ಬಾಗಿಲು ಹಾಳಾಗಿದೆ	75.000/–
13.	ಜೇಡಿಕಟ್ಟೆ	ಮೇಲ್ಚಾವಣಿ ಸೋರುತ್ತದೆ. ಕಿಟಕಿ ಬಾಗಿಲು ಹಾಳಾಗಿದೆ	75.000/–
14.	ಹನುಮಂತನಗರ ಬಡಾವಣೆ	ಮೇಲ್ಚಾವಣಿ ಸೋರುತ್ತದೆ. ಕಿಟಕಿ ಬಾಗಿಲು ಹಾಳಾಗಿದೆ.	25.000/–
15.	ಝಿಂಕ್ ಲೈನ್–4	ಕಿಟಕಿ ಬಾಗಿಲು. ನೆಲ. ತಾರಸಿ ರಿಪೇರಿ	75.000/–
16.	ವೇಲೂರು ಷೆಡ್–2	ಕಿಟಕಿ ಬಾಗಿಲು ರಿಪೇರಿ	25.000/–
17.	ಕೋಡಿಹಳಿ	ಕೇಂದ್ರದ ಕಟ್ಟಡ ಗೋಡೆ ಪೂರ್ಣ ಬಿದ್ದಿದೆ.	1.50.000/–
18.	ದೊಡ್ಡ ಗೋಪೇನಹಳ್ಳಿ	ನೆಲ. ಗೋಡೆ. ಕಿಟಕಿ ರಿಪೇರಿ	50.000/–
19.	ಕವಲಗುಂದಿ–2	ನೆಲ ಹಾಳಾಗಿದೆ. ಗೋಡೆ ಬಿರುಕುಬಿಟ್ಟಿದೆ. ಶೌಚಾಲಯ, ಹಾಳಾಗಿದೆ. ಕಿಟಕಿ. ಬಾಗಿಲು ಹಾಳಾಗಿದೆ.	50.000/–
20.	ವೇಲೂರು ಷೆಡ್–1	ಆರ್.ಸಿ.ಸಿ. ಕಿಟಕಿ ಬಾಗಿಲು ರಿಪೇರಿ	75.000/–

25th July 2008

1. ಪ್ರಶ್ನೋತ್ತರಗಳು

ಶ್ರೀ ಬಿ.ಕೆ. ಸಂಗಮೇಶ್ವರ : ಮಾನ್ಯ ಅಧ್ಯಕ್ಷರೆ. ಭದ್ರಾವತಿ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳು ಯಾವ ಸಂದರ್ಭದಲ್ಲಿ ಮಕ್ಕಳ ಮೇಲೆ ಬೀಳುತ್ತವೋ ಗೊತ್ತಿಲ್ಲ. ಈಗಾಗಲೇ 20 ಕಟ್ಟಡಗಳು ದುಃಸ್ಥಿತಿಯಲ್ಲಿವೆಯೆಂದು ಅವರ ಇಲಾಖೆಯಿಂದ ಮಾನ್ಯ ಸಚಿವರು ಮಾಹಿತಿಯನ್ನು ತರಿಸಿಕೊಂಡಿದ್ದಾರೆ. ಆ 20 ಕಟ್ಟಡಗಳ ಬಗ್ಗೆ ನಾವು ಯಾವುದೇ ಸಂದರ್ಭದಲ್ಲಿ ಅಲ್ಲಿಗೆ ಹೋದಾಗಾ ಅವರು ನಮ್ಮ ಬಳಿ ಜಗಳಕ್ಕೆ ಬರುತ್ತಾರೆ. ದಯವಿಟ್ಟು ಈ ಕಟ್ಟಡದ ದುಃಸ್ಥಿತಿಯಿಂದ ಅಲ್ಲಿ ಮಕ್ಕಳಿಗೆ ಆಗುವ ಅನಾಹುತವನ್ನು ತಪ್ಪಿಸುವುದಕ್ಕೆ ಈಗ ರಾಜ್ಯ ವಲಯ ದುರಸ್ಥಿಗಾಗಿ ರೂಪಿಸಲಾಗಿರುವ ಯೋಜನೆ ಇರುವುದರಿಂದ ಅದರಲ್ಲಿ ವಿಶೇಷವಾಗಿ ನಮ್ಮ ಭದ್ರಾವತಿ ಕ್ಷೇತ್ರಕ್ಕೆ ಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಕೇಳಿದ್ದೇನೆ. ಅದಕ್ಕೆ ಸಚಿವರು ಇದನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆಂದು ತಿಳಿಸಿದ್ದಾರೆ. ದಯವಿಟ್ಟು ಇದರ ಬಗ್ಗೆ ವಿಶೇಷವಾದ ಗಮನಹರಿಸಿ ನಮಗೆ ಕೊಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಅದೇ ರೀತಿಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಯಾವುದೇ ರೀತಿಯ ದೂರುಗಳು ಬಂದಿಲ್ಲವೆಂದು ಹೇಳಿದ್ದಾರೆ. ನಾನೇ ಎರಡು. ಮೂರು ಬಾರಿ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ದೂರನ್ನು ಕೊಟ್ಟಿದ್ದೇನೆ. ಅದನ್ನು ದಯವಿಟ್ಟು ಪರಿಶೀಲಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ ; ಮಾನ್ಯ ಅಧ್ಯಕ್ಷರೆ, ಈಗಾಗಲೇ ಭದ್ರಾವತಿ ಕ್ಷೇತ್ರದಲ್ಲಿ 261 ಅಂಗನವಾಡಿ ಕೇಂದ್ರಗಳಿದ್ದು. ಅವುಗಳಲ್ಲಿ 146 ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇರುತ್ತವೆ. ಇನ್ನು 20 ಕಟ್ಟಡಗಳು ದುಸ್ಥಿತಿಯಲ್ಲಿರುವುದು ಈಗಾಗಲೇ ಗಮನಕ್ಕೆ ಬಂದಿದೆ. ಆದರೆ ಇದರ ನಿರ್ವಹಣೆಯ ಜವಾಬ್ದಾರಿಯು ಜಿಲ್ಲಾ ಪಂಚಾಯತ್‌ಗೆ ವಹಿಸಿರುವುದರಿಂದ. ಜಿಲ್ಲಾ ಪಂಚಾಯತ್‌ನಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ತಿಳಿಸಲಿಚ್ಛಿಸುತ್ತೇನೆ. ನಾವು ಈಗಾಗಲೇ ಭದ್ರಾವತಿ ಕ್ಷೇತ್ರಕ್ಕೆ ಎರಡು ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು. 22 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಇನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಬಗ್ಗೆ ದೂರು ಏನು ಇದೆ. ಅದರ ಬಗ್ಗೆ ವಿಶೇಷ ಲೆಕ್ಕ ತಪಾಸಣೆ ಮಾಡಲು ಆದೇಶಿಸಿದ್ದು. ಪರಿಶೀಲನೆಯಲ್ಲಿರುತ್ತದೆ. ಈ ಪರಿಶೀಲನೆಯ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ಶ್ರೀ ಜೆ.ಸಿ.ನಾಯ್ಕರವರೆ. ತಮ್ಮ ಪ್ರಶ್ನೆ ಮತ್ತೊಂದು ಇಲಾಖೆಗೆ ವರ್ಗಾವಣೆಯಾಗಿದೆ. ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಬಿ. ಪಿ. ಎಲ್. ಕಾರ್ಡ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 54 : 159

ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಗೊಪಾಲ್ ಕೃಷ್ಣ ವೈ.(ಮೊಳಕಾಲ್ಮೂರು)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ.ಸಂ.	ಪ್ರಶ್ನೆ
ಅ)	ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಷ್ಟು ಜನರಿಗೆ ಬಿಪಿಎಲ್ ಕಾರ್ಡಗಳನ್ನು ವಿತರಿಸಲು ಸರ್ಕಾರ ತೀರ್ಮಾನಿಸಿದೆ.
ಉತ್ತರ	
	ಎಲ್ಲಾ ಅರ್ಹರಿಗೆ ಪಡಿತರ ಚೀಟಿ ವಿತರಿಸಲಾಗುವುದು.
ಪ್ರಶ್ನೆ	
ಆ)	ಹಾಗಿದ್ದಲ್ಲಿ. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಯಾವ ಪ್ರಮಾಣದಲ್ಲಿ ಆಹಾರವನ್ನು ವಿತರಿಸಲು ಯೋಜಿಸಲಾಗಿದೆ.
	ಕೆಳಕಂಡ ಪ್ರಮಾಣದ ಆಹಾರ ದಾನ್ಯಗಳನ್ನು ವಿತರಿಸಲಾಗುತ್ತಿದೆ :–
	ಅಂತ್ಯೋದಯ ಪಡಿತರ ಚೀಟಿಗೆ :–
	ಅಕ್ಕಿ 29 ಕೆ.ಜಿ.
	ಗೋದಿ. 06 ಕೆ.ಜಿ.
	ಅಕ್ಷಯ ಪಡಿತರ ಚೀಟಿಗೆ :–
	ಅಕ್ಕಿ ಯೂನಿಟ್ ಒಂದಕ್ಕೆ 04 ಕೆ.ಜಿ.
	ಗರಿಷ್ಟ 20 ಕೆ.ಜಿ.
	ಗೋದಿ ಯೂನಿಟ್ ಒಂದಕ್ಕೆ 01 ಕೆ.ಜಿ. ಗರಿಷ್ಟ 03. ಕೆ.ಜಿ.